ಇ) ಈ ಮೇಲಿನ ಅವಧಿಯಲ್ಲಿ ಹೊಸದಾಗಿ ಪಡಿತರ ಚೀಟಿ ನೀಡಿಕೆಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು (ಇಲ್ಲಿಯವರೆಗಿನ ಮಾಹಿತಿಯನ್ನು ಒದಗಿಸುವುದು)

ಈ) ಹಾಗಿದ್ದಲ್ಲಿ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ತೀರುವಳಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ. ಎನ್. ನಂಜಪ್ಪ.
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ವರ್ಷಾವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

1992-93 - 1978
1993-94 - 3243
1994-95 - 4294.

ಆ) ವರ್ಷವಾರು ವಿವರಗಳು ಈ ಕೆಳಕಂಡಂತಿದೆ.

1992-93 - 1917
1993-94 - 3094
1994-95 - 3194.

ಇ) 1992-93 ಹಾಗೂ 1993-94ರ ಸಾಲುಗಳಲ್ಲಿ ಕ್ರಮವಾಗಿ 61 ಹಾಗೂ 149 ಅರ್ಜಿಗಳನ್ನು ಅವಶ್ಯಕ ಮಾಹಿತಿ ಹಾಗೂ ದಾಖಲೆಗಳನ್ನು ನೀಡದೇ ಇದ್ದುದಕ್ಕಾಗಿ ತಿರಸ್ಕರಿಸಲಾಗಿದೆ. ಈ ಎರಡೂ ವರ್ಷಗಳ ಅವಧಿಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ. 1994-95ರ ಸಾಲಿನಲ್ಲಿ 290 ಅರ್ಜಿಗಳು ನಿರೀಕ್ಷಕರ ವರದಿಯೊಂದಿಗೆ ಪಡಿತರ ಚೀಟಿ ನೀಡಲು ಬಾಕಿ ಇರುವುದು ಹಾಗೂ 795 ಅರ್ಜಿಗಳು ವಿಚಾರಣೆಗಾಗಿ ಬಾಕಿ ಇರುವುದು.

ಈ) ಬಾಕಿ ಇರುವ ಅರ್ಜಿಗಳನ್ನು ಸಾಧ್ಯವಿದ್ದಷ್ಟು ಶೀಘ್ರದಲ್ಲೇ ವಿಲೇವಾರಿ ಮಾಡಲಾಗುವುದು.

ವಿಷಯ: ಬಾದಾಮಿಯಲ್ಲಿ 110. ಕೆ.ವಿ. ವೋಲ್ಟೇಜ್ ಸಬ್‌ಸ್ಟೇಷನ್ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 124(361)

ಶ್ರೀ. ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 110 ಕೆ.ಕೆ.ವಿ. ವೋಲ್ಟೇಜ್ ಸಬ್‌ಸ್ಟೇಷನ್ ಬಾದಾಮಿಯಲ್ಲಿ ಸ್ಥಾಪಿಸಲು ಸರಕಾರದವರು ತಾಂತ್ರಿಕ ಆಡಳಿತ್ಮಾಕ ಮಂಜೂರಾತಿ ಮಾಡಿರುವರೆ?

ಆ) ಹಾಗಿದ್ದಲ್ಲಿ ಈ ಯೋಜನೆ ಕಾರ್ಯಗತಗೊಳಿಸಲು ಈ ವರ್ಷದ ಆಯವ್ಯಯಗಳಲ್ಲಿ ನಿಗದಿಪಡಿಸಿದ ಹಣವೆಷ್ಟು ಹಾಗೂ ಎಂದು ಮುಗಿಸಲಾಗುವುದು?

ಶ್ರೀ. ಜೆ.ಎಚ್. ಪಟೇಲ್
(ಉಪಮುಖ್ಯಮಂತ್ರಿಗಳು)

ಆ) ಹೌದು.

ಆ) ಈ ಯೋಜನೆಯ ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1994-95) ಆಯವ್ಯಯದಲ್ಲಿ 15 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಜೂನ್ 1996ರ ಅಂತ್ಯದೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ವಿಷಯ:ಬಿಜಾಪುರ ಜಿಲ್ಲೆಯಲ್ಲಿರುವ ಲೋಕಪಯೋಗಿ ರಸ್ತೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:125(554)
ಶ್ರೀ. ಜೆ.ಬಿ. ಪಾಟೀಲ್ (ಬೀಳಗಿ)

ಮಾನ್ಯ, ಲೋಕಪಯೋಗಿ ಸಚಿವರು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಲೋಕೋಪಯೋಗಿ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಅವುಗಳ ರಿಪೇರಿಗಾಗಿ, ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

(ಶ್ರೀ. ಶಿವಾನಂದ ಹೆಚ್. ಕೌಜಲಗಿ)
(ಲೋಕೋಪಯೋಗಿ ಸಚಿವರು.

ಅ) ಬಿಜಾಪುರ ಜಿಲ್ಲೆಯ ಲೋಕೋಪಯೋಗಿ ಇಲಾಖೆ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1994-95ರ ಪ್ರಸಕ್ತ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಒಟ್ಟು 843.84 ಲಕ್ಷ ರೂ. ಅಂದಾಜುಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದಕ್ಕಾಗಿ ಈ ಸಾಲಿನಲ್ಲಿ 594.83 ಲಕ್ಷ ರೂ.ಗಳ ಅನುದಾನ ನಿಗಧಿಪಡಿಸಿದೆ. ರಸ್ತೆಗಳಲ್ಲಿ ಆಗಿರುವ ಗುಂಡಿಗಳನ್ನು ತುಂಬಿ ಸಂಚಾರ ಸುಗಮಗೊಳಿಸಲು ಆಧ್ಯತೆಯ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಲಭ್ಯವಿರುವ ಅನುದಾನದಲ್ಲಿ ಸಂಚಾರಕ್ಕೆ ಅಡಚಣೆಯಾದ ರೀತಿಯಲ್ಲಿ ರಸ್ತೆಗಳನ್ನು ನಿರ್ವಹಿಲಾಗುತ್ತಿದೆ.